# ಮಲ್ಲಿಕಾ ಘಂಟಿಯವರ ಕಾವ್ಯ ವಿಮರ್ಶೆ

**ಡಾ.ಬಸವರಾಜ ಪೂಜಾರ್, ಸಹ ಪ್ರಾಧ್ಯಾಪಕರು-ಕನ್ನಡ, ಎಸ್ ಜಿ ಕಾಲೇಜು,ಕೊಪ್ಪಳ.**

**ಪೀಠಿಕೆ:**

ಕಾವ್ಯದಲ್ಲಿ ಆಕ್ರೋಶ ಮಂಜಿನಂತೆ ಹರಿಯುತ್ತದೆ. ಆ ಆಕ್ರೋಶಕ್ಕೆ ನೈತಿಕತೆಯ ಸ್ಪರ್ಷವಿದೆ. ಇದರಿಂದ ಅದು ವಾಚ್ಯವಾಗಿ ಕಾಣಿಸಿಕೊಳ್ಳುವುದಿಲ್ಲ. ಪ್ರಭುತ್ವದ ಕರಿನೆರಳು ಆವರಿಸಿಕೊಳ್ಳುವ ಬಗೆಯನ್ನು ಕಾವ್ಯ ತೀವ್ರವಾಗಿ ತಿರಸ್ಕರಿಸುತ್ತದೆ. ಹೊಸ ಬೆಳಕಿಗಾಗಿ ಹಂಬಲಿಸುತ್ತದೆ. ಮಹಿಳೆಯ ಬೌದ್ಧಿಕತೆಯನ್ನು ತನ್ನಾಧೀನ ಮಾಡಿಕೊಂಡ ಪುರುಷ ಪ್ರಭುತ್ವವನ್ನು ನಿರಸನಗೊಳಿಸುವ ನಿಲುವು ಕಾವ್ಯಕ್ಕಿದೆ. ಲೋಕದ ಎಲ್ಲಾ ಅಧಿಕಾರ ಕೇಂದ್ರಗಳನ್ನು ತನ್ನದನ್ನಾಗಿ ಮಾಡಿಕೊಂಡ ಪುರುಷ ಪ್ರಭುತ್ವವನ್ನು ಮೀರುವ ಬಗೆಯನ್ನು ಕಾವ್ಯ ಶೋಧಿಸುತ್ತದೆ. ಸಾಮಾಜಿಕ ಜನಪದ ನಂಬಿಕೆಗಳೊಳಗಿನ ಆತ್ಮಶಕ್ತಿಯನ್ನು ತನ್ನದಾಗಿಸಿಕೊಂಡು ಪರ್ಯಾಯಗಳನ್ನು ಹುಡುಕುವ ಗಾಢ ಚಿಂತನೆ ಕಾವ್ಯಕ್ಕಿದೆ. ಪ್ರಜಾಪ್ರಭುತ್ವ ಜಾತ್ಯಾತೀತ ಸಮಾನತೆಯ ತತ್ವವನ್ನೇ ಕಾವ್ಯ ಪ್ರಣಾಳಿಕೆಯನ್ನಾಗಿ ಮಾಡಿಕೊಂಡಿದೆ. ಹಾಗಂತ ಅದು ತನ್ನ ಕಲಾತ್ಮಕತೆಯನ್ನು ಬಿಟ್ಟು ಕೊಡುವದಿಲ್ಲ. ರಾಜಕೀಯ ಅಧಿಕಾರದ ಪಾಲನ್ನು ಮಹಿಳೆ ಗಟ್ಟಿಯಾಗಿ ಪಡೆದುಕೊಳ್ಳಬೇಕೆಂಬ ಒತ್ತಾಯವನ್ನು ಮಾಡುತ್ತದೆ. ಈ ನೆಲೆಯಲ್ಲಿ ಡಾ. ಮಲ್ಲಿಕಾ ಘಂಟಿಯವರ ಕಾವ್ಯವನ್ನು ನೋಡಬೇಕಿದೆ.

ಸ್ಥಳೀಯತೆಯಲ್ಲಿ ಅಪಾರ ನಂಬಿಕೆ ಹೊಂದಿದ ಕಾವ್ಯ ಕೆರೆ, ಹಳ್ಳ, ಹೊಳೆಯನ್ನು ತನ್ನ ಭೂಮಿಕೆಯನ್ನಾಗಿ ಮಾಡಿಕೊಂಡಿದೆ. ಆ ಸ್ಥಳೀಯತೆ ಜಾತಿ, ಧರ್ಮಾಂಧತೆ, ಉಳ್ಳವರ ಕ್ರೌರ್ಯದ ಕಿಲುಬಿಲ್ಲದ ಪರಿಶದ್ದ ತಿಳಿನೀರಿನ ಒರತೆ. ಕಾವ್ಯಕ್ಕೆ ಅದುವೇ ಜೀವದಾಯಿನಿಯಾಗಿ ಹರಿಯುವ ಅಂತರ್ ಗಂಗೆ. ಮಹಿಳಾ ಬವಣೆಗಳು ಹರಿಯುವ ಹೊಳೆಯಲ್ಲಿ ತೊಳೆದುಕೊಂಡು ಹೊಸ ಉಸಿರು ಪಡೆಯುತ್ತವೆ. ಹೊಳೆ ಹೇಗೆ ಮನುಷ್ಯನಿಗೆ ಜೀವಶಕ್ತಿಯೋ ಹಾಗೆ ಇವರ ಕಾವ್ಯಕ್ಕೂ ಜೀವದುಸುರು.

ಅರಗಿಸಿಕೊಳ್ಳುವೆ ಕರಗಿಸಿಕೊಳ್ಳುವೆ
ನಿನ್ನ ನನ್ನ ಕಣ್ಣೀರ
ನೆಲ ಪಿಸು ನುಡಿಯದಂತೆ
ಆಕಾಶ ಮಿಸುಕದಂತೆ
ಹೊಳೆಯ ನೀರು
ಹಡೆದ ತಾಯಿಯ ಮಡಿಲು
ತೊಳೆಯುತ್ತದೆ ತನ್ನ ಗತದ
ಕಲೆಗಳ ಮೈದಡವಿ ಮುದ್ದಿಸುತ್ತದೆ
ನನ್ನಂತೆ ನೀನು ಹರಿಯುತ್ತಿರೆಂದು
ತುಂಬುತ್ತದೆ ನನ್ನೆದೆಯೊಳಗೆ ಛಲದುಸಿರ

ಈ ಕಾವ್ಯ ಹೊಳೆಯನ್ನು ತನ್ನ ಶಕ್ತಿಯನ್ನಾಗಿ ಮಾಡಿಕೊಳ್ಳುತ್ತದೆ. ಬೃಹತ್ತಾದ ಜಲಪಾತಗಳಿಗೆ ಹೊಳೆಯನ್ನು ಎದುರಾಗಿಸುತ್ತದೆ. ಮಹಿಳೆಯ ಧ್ವನಿ ಉಡಿಗಿಸಿದ ಜಗತ್ತನ್ನು ಸಹಿಸಿಕೊಂಡು ಸಾಕಾದ ಜೀವ ಹೊಳೆಯಂತೆ ನಿರಂತರ ಹರಿಯುತ್ತಿರಬೇಕು. ಹೊಳೆ ಬಂದು ಬೀಳುವ ನೂರಾರು ಬಗೆಯ ಕಸ ಕಡ್ಡಿಗಳನ್ನು ಹೊತ್ತುಕೊಂಡು ಚಲಿಸುತ್ತದೆ. ಮಹಿಳೆಯು ತನ್ನ ಜೀವನದಲ್ಲಿ ದೊಡ್ಡ ನೊಗವನ್ನೇ ಹೊತ್ತುಕೊಂಡು ಹೋಗಬೇಕು. ಪುರುಷನ ಅಣ್ಣಂಚಿನಲ್ಲಿಯೇ ಬದುಕಬೇಕಾದ ಮಹಿಳೆ ಹೊಳೆಯೊಂದಿಗೆ ತನ್ನ ಸುಖ ದುಃಖವನ್ನು ನಿವೇದಿಸಿಕೊಳ್ಳುತ್ತಾಳೆ. ಆಕೆಯ ಸ್ಥಿತಿಯನ್ನು ಯಾರು ಕೇಳಲಿಕ್ಕೆ ತಯಾರಿಲ್ಲ. ಅದು ಆಕೆಯ

ಹಣೆಬರಹ ಮತ್ತು ಜೀವನ ವಿಧಾನವೆಂದೆ ಭಾವಿಸುತ್ತಾರೆ. ಆದ್ದರಿಂದ ಆಕೆ ಹೊಳೆಯನ್ನು ನಂಬುತ್ತಾಳೆ. ಅದರಿಂದ ಶಕ್ತಿಯನ್ನು ತುಂಬಿಕೊಳ್ಳುತ್ತಾಳೆ.

ಕಣ್ಣಲ್ಲಿ ಮೊಳೆ ಹೊಡೆದವರ
ಮರೆಯಲು ಆಗು ನನ್ನಂತೆ
ನಿಲ್ಲದಿರೂ ಎಲ್ಲಿಯೂ ಆಸರೆಗೆ
ನಿಂತ ನೆಲವೆಲ್ಲವೂ ವಿಷ ಈ
ಸತ್ಯ ತಿಳಿದಿರಲಿ ನಿನಗೆ
ಶಿಲುಬೆ ಹೊತ್ತು
ನಡೆಯುತ್ತಿರು ಏಸುವಿನಂತೆ

ಮಹಿಳೆ ಅಸ್ತಿತ್ವ ಇಲ್ಲದಂತೆ ಬದುಕುತ್ತಾಳೆ. ಸದಾ ಪುರುಷನ ಆಧೀನ, ತೊತ್ತಾಗಿ ಇರಬೇಕಾದ ಸಾಮಾಜಿಕ ಸುರುಳಿಯಲ್ಲಿ ಆಕೆ ಇದ್ದಾಳೆ. ಆಕೆಯ ಪಾಲಿಗೆ ನೆಲವೆಲ್ಲವೂ ವಿಷ. ಅಂದರೆ ಮಹಿಳೆ ಬಗ್ಗೆ ಇರುವ ಸಾಮಾಜಿಕ ನಿಲುವುಗಳು ವಿಷಪೂರಿತವಾದುವು. ಆಕೆಯ ಸ್ವಾತಂತ್ರ್ಯ, ಹಕ್ಕುಗಳನ್ನು ಧಮನ ಮಾಡುವಂತವು. ಆದ್ದರಿಂದ ಈ ಸಮಾಜದ ವಿಷವನ್ನು ಉಂಡು ಅವರೆದುರಿಗೆ ಕರುಣೆಯಿಂದ ಬದುಕುವ ಇಚ್ಛಾಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಅದುವೆ ಲೋಕವನ್ನು ಎದುರಿಸುವ ಪರಿ.

ಕದ್ದಿಲ್ಲ ಸುಲಿದಿಲ್ಲ
ಸುಳ್ಳು ದರೋಡೆಯಂತೂ
ಮೊದಲೆ ಮಾಡಿಲ್ಲ
ಆದರೂ ನಾವುಗಳು ಖೈದಿಗಳು
ಹಳೆಯ ಖೈದಿಗಳ ಖಾಸಸಂಸ್ಕೃತಿಗೆ
ಹುಟ್ಟಿದ ಎಳೆಯ ಪೋರಿಗಳೆಲ್ಲ ಸೇರಿ
ಒಳಹೊರಗಿನಿಂದ ತೂರಿ ಬರುವ
ಬಾಣಬರ್ಚಿಗಳಿಗೆ ಎಳೆಯ ದೇಹ ಒಡ್ಡುತ್ತಲೇ
ದಡ್ಡು ಗಟ್ಟುತ್ತ ಬೆಳೆಯುತ್ತವೆ

ಮಹಿಳೆ ಪರಂಪರಾನುಗತವಾಗಿ ರೂಢಿಸಿಕೊಂಡು ಬಂದ ಕ್ರಮದಲ್ಲಿಯೇ ಜೀವಿಸಬೇಕು. ಅದರಂತೆ ಬದುಕಲು ಇಡೀ ಸಮಾಜ ಒಪ್ಪುಸುತ್ತದೆ. ಒಪ್ಪದಿದ್ದರೆ ಅದು ಸಾಮಾಜಿಕ ಅಪರಾಧವಾಗುತ್ತದೆ. ಅದಕ್ಕೆ ತಲೆಕೊಟ್ಟು ಬದುಕಬೇಕು. ಮಹಿಳೆ ಅನ್ನುವ ಕಾರಣಕ್ಕೆ ಪುರುಷನ ಬಂಧಿಯಾಗಿ ಬದುಕಬೇಕು. ಯಾವ ಅಪರಾಧ ಮಾಡದಿದ್ದರು ನಾಲ್ಕು ಗೋಡೆಯ ಮಧ್ಯೆ ಕಳೆಯಬೇಕು. ಸ್ವಂತಿಕೆಯಿಂದ ತನ್ನ ಜೀವನವನ್ನು ಬದುಕುವ ಸ್ವಾಯತ್ತತೆಯನ್ನು ಸಮಾಜ ಮಹಿಳೆಗೆ ನೀಡಿಲ್ಲ. ಪುರುಷ ಎಷ್ಟೇ ಉದಾರವಾಗಿ ನಡೆದುಕೊಂಡರೂ ತನ್ನಾದಿನದಲ್ಲಿಯೇ ಇರಬೇಕೆಂಬ ವಾತವರಣವನ್ನು ಸೃಷ್ಟಿಸುತ್ತಾನೆ. ಅದಕ್ಕನುಗುಣವಾಗಿ ಬದುಕುವ ಮನೋಭಾವವನ್ನು ಮಹಿಳೆ ಹೊಂದುತ್ತಾ ಹೋಗುತ್ತಾಳೆ. ಈ ಬಂಧನದಿಂದ ಮಹಿಳೆಗೆ ಮುಕ್ತಿ ಸಿಗಬೇಕು

ನೋಡಿ ಅಯ್ಯಾ
ಲೋಕದ ಡೊಂಕ ನಾನೇಕೆ ತಿದ್ದಲಿ
ನನ್ನ ತನು, ಮನವೇ ಸಂತೃಪ್ತಿಗೊಂಡಿಲ್ಲ
ಕೂಲಸಂಗಮದಲ್ಲಿ
ಕುತ್ತಿಗೆವರೆಗೆ ಮಾತ್ರ ನೀರು ಬಂದಿದೆ
ಪೂರ್ತಿಯಾದ ಮೇಲೆ ತಮಗೆ

ನನ್ನ ಅಭಿಪ್ರಾಯ ತಿಳಿಸಿ ಓಲೆ ಬರೆಯುವೆ
ಬರಲೇ, ಶರಣು ಶರಣಾರ್ಥಿಗಳು

ಬಸವಣ್ಣ ಕಟ್ಟಿದ ಅರಿವಿನ ಸಮಾಜ ಯಾವ ಸ್ಥಿತಿ ತಲುಪಿದೆಂಬುದನ್ನು ಈ ಕವಿತೆ ಶಕ್ತವಾಗಿ ಅಭಿವ್ಯಕ್ತಿಸುತ್ತದೆ. ಬಸವಣ್ಣನ ಆಶಯಗಳಿಗೆ ವಿರುದ್ಧವಾಗಿ ಬಸವಣ್ಣನನ್ನು ಮೆರೆಸುತಿರುವುದು, ಆರಾಧಿಸುತ್ತಿರುವುದು, ಪ್ರತಿಮೆಗಳನ್ನಾಗಿ ಪೂಜಿಸುತ್ತಿರುವುದನ್ನು ಕವಿತೆ ನಿರಾಕರಿಸುತ್ತದೆ. ವ್ಯಂಗ್ಯಾತ್ಮಕವಾಗಿ ಚಾಟಿ ಬೀಸುತ್ತದೆ. ಆತನ ಅನುಯಾಯಿಗಳು ಬಸವಣ್ಣನನ್ನು ದಾಳವನ್ನಾಗಿ ಮಾಡಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ರಾಜಕಾರಣಕ್ಕೆ ಆತನ ಹೆಸರನ್ನು ಎಳೆದು ತಂದಿದ್ದಾರೆ. ಸಮಾನತೆಯ ಬೀಜ ಬಿತ್ತಿದ ಆತನ ಆಶಯಗಳಿಗೆ ಮಸಿ ಬಳಿಯುತ್ತಿದ್ದಾರೆ. ಆತನ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಮೆರೆಯುತ್ತಿದ್ದಾರೆ. ಆತನ ಚಿಂತನೆಯನ್ನು ಸಮಾಧಿ ಮಾಡುತ್ತಿದ್ದಾರೆ. ಆದ್ದರಿಂದ ಕೂಡಲಸಂಗಮದಲ್ಲಿ ಕುತ್ತಿಗೆವರೆಗೆ ಮಾತ್ರ ನೀರು ಬಂದಿದೆ, ಪೂರ್ತಿಯಾದ ಮೇಲೆ ತಮಗೆ ತಿಳಿಸಿ ಪತ್ರ ಬರೆಯುವೆ ಎಂದು ಕವಿತೆ ಹೇಳುತ್ತದೆ. ಬಸವಣ್ಣನ ಕನಸುಗಳನ್ನು ಹೊತ್ತ ಕವಿತೆಗಳು ಆ ಕನಸುಗಳಿಗೆ ಆಗುತ್ತಿರುವ ಗಾಯಗಳನ್ನು ನೋಡಿ ವಿಷಾದದಿಂದ ಮರುಗುತ್ತದೆ. ಬಸವಣ್ಣನ ಆಶಯಗಳು ಸಾಮಾಜಿಕವಾಗಿ ಸಾಕಾರ ಪಡೆಯುವ ಕಡೆ ಚಲಿಸುತ್ತದೆ.

ಹೊಕ್ಕಳ ಬಳ್ಳಿಯ ಸಂಬಂಧ ಕಡಿದುಕೊಂಡು
ಅನಾಥ ಬದುಕಿಗೆ ಹೆಸರಾದವರು
ಮೈ ಚರ್ಮ ಸುಲಿದು ನಿಮ್ಮ ಕಾಲಿಗೆ
ಪಾದುಕೆ ಮಾಡುವ ನಾವು ಭಾರತಾಂಬೆ ಮಕ್ಕಳೆ

ಭಾರತಾಂಬೆಯ ಮಕ್ಕಳಲ್ಲಿ ತುಂಬಾ ಅಸಮಾನತೆ ಇದೆ. ಕೆಲವರು ಊಟಕ್ಕೆ ಗತಿಯಿಲ್ಲದಂತೆ ಬದುಕಿದರೆ ಕೆಲವರು ಉಂಡದ್ದು ಅರಗಿಸಿಕೊಳ್ಳುವ ಬಗ್ಗೆ ಯೋಚಿಸುವ ಸ್ಥಿತಿ ಇದೆ. ರಾಜಕಾರಣವೂ ಭಾರತಾಂಬೆಯನ್ನು ಭಾನಾತ್ಮಕವಾಗಿ ಬಳಸಿಕೊಂಡು ಜನರ ಮಧ್ಯೆ ವಿಘಟನೆಯನ್ನು ತರುತ್ತಿದೆ. ಇದರ ನಡುವೆ ನಿಜವಾದ ಸಮಸ್ಯೆಗಳು ಕಣ್ಣಿಗೆ ಕಾಣದೆ ಮರೆಯಾಗುತ್ತಿವೆ. ಹಸುವು, ನಿರುದ್ಯೋಗ ಬಡತನದ ಬಗ್ಗೆ ಯೊಚಿಸದೆ ಕೇವಲ ಬೌಗೋಳಿಕವಾಗಿ ದೇಶವನ್ನು ಪರಿಭಾವಿಸುತ್ತಿದ್ದೇವೆ. ಅದಕ್ಕೆ ಕವಿತೆ ನಿಜವಾದ ಭಾರತಾಂಬೆಯ ಮಕ್ಕಳನ್ನು ಪರಿಚಯಿಸುತ್ತಿದೆ. ಅವರು ನಿತ್ಯವು ದುಡಿವವರು. ಬೆವರು ಸುರಿಸುವವರು. ಉಳ್ಳವರಿಗೆ ತಮ್ಮ ಚರ್ಮವನ್ನೇ ಸುಲಿದು ಪಾದುಕೆ ಮಾಡುವವರು. ಇವರು ನಿಜವಾದ ಭಾರತಾಂಬೆಯ ಮಕ್ಕಳು. ಇವರನ್ನು ಕುರಿತು ಚಿಂತಿಸುವುದು, ಪ್ರೀತಿಯಿಂದ ಕಾಣುವುದು ದೇಶಭಕ್ತಿ.

ನನ್ನ ಹೃದಯದಲ್ಲಿ ಪ್ರೀತಿಯಿತ್ತು
ಒಲೆಯ ಬೆಂಕಿಗೆ ಝಳ ತೋರುವಂತೆ
ನೀ ಬಂದು ಒಲೆಯೊಳಗಿನ ಬೂದಿಯಲ್ಲಿ
ಚೇಳಿನಂತೆ ಕೊಂಡಿ ಎತ್ತಿ ಕುಳಿತದ್ದು ತಿಳಿಯಲಿಲ್ಲ

ಸಹಜವಾದ ಪ್ರೀತಿಯಲ್ಲಿ ಮುಳುಗುವ ಮಹಿಳೆಯನ್ನು ಮೋಸಗೊಳಿಸುವ ಪ್ರಮೇಯಗಳು ನಿತ್ಯವು ಸಮಾಜದಲ್ಲಿ ನಡೆಯುತ್ತಿರುತ್ತವೆ. ಮೋಸಕ್ಕೆ ಬಲಿಯಾದ ಮಹಿಳೆಗೆ ಯಾವ ನ್ಯಾಯ ಸಿಗುವುದಿಲ್ಲ. ಮಹಿಳೆಯನ್ನೇ ಅಪರಾಧಿಯನ್ನಾಗಿ ಮಾಡಲಾಗುತ್ತದೆ. ನವಿರಾದ ಮಾತು ನಡತೆಯಿಂದ ಒಲಸಿಕೊಂಡು ಭೋಗಿಸಿ ಬಿಸಾಕುವ ಪುರುಷ ಸಂತತಿ ಬೂದಿಯಲ್ಲಿನ ಕಾವ್ಯಕ್ಕೆ ಚೇಳಿನಂತೆ ಕಾಣುತ್ತದೆ. ಆಕೆಯ ಪ್ರೀತಿಯ

ಒರತೆಯನ್ನು ಸುಟ್ಟು ಭಸ್ಮ ಮಾಡುವ ಭಸ್ಮಾಸೂರರು ಚೇಳುಗಳಾಗಿ ವಿಷ ಕಕ್ಕುತ್ತಲೇ ಇದ್ದಾರೆ. ಇವರ ಈ ಮರ್ಮವನ್ನು ಮಹಿಳೆ ಅರಿಯಬೇಕಿದೆ. ಇಲ್ಲದಿದ್ದರೆ ಆಕೆಯ ಚಂದ್ರನಂತ ಪ್ರೀತಿಯ ಕೊಳಕ್ಕೆ ಕಲ್ಲು ಹಾಕುವ ಧೂರ್ತರಿಗೆ ಬಲಿಯಾಗಬೇಕಾಗುತ್ತದೆ.

**ಉಪಸಂಹಾರ:**

ಇಲ್ಲಿಯ ಕವಿತೆಗಳು ಲಯಬದ್ಧವಾದ ದೇಶಿ ನುಡಿಗಟ್ಟೊಂದನ್ನು ಸೃಷ್ಟಿಸಿಕೊಂಡಿವೆ. ಮಹಿಳೆ ಅನುಭವಿಸುವ ಹಿಂಸೆಯ ನೆಲೆಗಳನ್ನು ನಿಕಷಕ್ಕೊಡ್ಡುತ್ತವೆ. ಪುರುಷ ನಂಬಿಕೊಂಡು ಬಂದ ಪ್ರಮಾಣಗಳನ್ನು ಅವಲೋಕನ ಮಾಡಿಕೊಳ್ಳುವ ಒತ್ತಾಯವನ್ನು ಮಾಡುತ್ತವೆ. ತಣ್ಣಗೆ ಹಿಮದಂತೆ ಪುರುಷರ ಕ್ರೌರ್ಯವನ್ನು ಬಯಲುಗೊಳಿಸುತ್ತವೆ. ಮಹಿಳೆ ವಹಿಸಬೇಕಾದ ಎಚ್ಚರವನ್ನು ತುಂಬುತ್ತವೆ. ಮಹಿಳೆ ತನ್ನ ಧಾರಣ ಶಕ್ತಿಯನ್ನು ಬಳಸಿಕೊಂಡು ಮುನ್ನಡೆಯಬೇಕಾದ ನೈತಿಕ ದಾರಿಯನ್ನು ತೋರಿಸುತ್ತವೆ. ಬೆವರುಂಡ ಜೀವಿಗಳು ನವ ಜೀವನವನ್ನು ಪಡೆಯುವ ಬಗೆಯನ್ನು ಶೋಧಿಸುತ್ತವೆ. ಪುರುಷನ ಪ್ರಮಾಣಗಳನ್ನು ಭಂಜನಗೊಳಿಸಿ ಸ್ತ್ರೀ ಅಸ್ಮಿತೆಯನ್ನು ಸ್ಥಾಪಿಸುತ್ತವೆ.

**ಆಕರ ಗ್ರಂಥಗಳು:**


- ತನುಕರಗದವರಲ್ಲಿ, ಮಲ್ಲಿಕಾ ಘಂಟಿ, ಗೌತಮ್ ಪ್ರಕಾಶನ, ೨೦೦೦.
- ಹೊಳೆ ಮತ್ತು ನಾನು, ಕಾಮನಬಿಲ್ಲು ಬೆಳಕಲ್ಲ, ಮಲ್ಲಿಕಾ ಘಂಟಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೮
- ಸ್ತ್ರೀವಾದಿ ಚಿಂತನೆ, ಮಲ್ಲಿಕಾ ಘಂಟಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೨೦.